ಖರೀದಿ ಮಾಡುವವರು ದೊಡ್ಡ ರೈತರೆ ಇರುತ್ತಾರೆ, ಹೆಚ್ಚು ಜಮೀನುದಾರರೇ ಇರುತ್ತಾರೆ. ಅವರಿಗೇ ಇದು ಅನುಕೂಲವಾಗತಕ್ಕದ್ದು. ಈ ವರ್ಷದಲ್ಲಿ ನಾವು ಪ್ರತಿ ತಾಲ್ಲೂಕಿಗೆ 20 ಟ್ರಾಕ್ಟರ್ ಮತ್ತು 20 ಪವರ್ ಟಿಲ್ಲರ್‌ಗಳನ್ನು ಪೂರೈಸಬೇಕೆಂದು ಅನುದಾನದಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ. ಮಾನ್ಯ ಸದಸ್ಯರೇನು ಹೇಳಿದ್ದಾರೆ ರಾಜ್ಯದಲ್ಲಿ ಕೆ.ವಿ.ಕೆ.ಗಳೇನಿವೆ, 25 ಮತ್ತು 4 ಎನ್.ಜಿ.ಒ.ಗಳದ್ದು ಇದೆ. ತಮ್ಮ ತಾಲ್ಲೂಕಿನಲ್ಲಿ ಸಹ ಇದೆ. ಹುಲುಕೋಟಿಯಲ್ಲಿ, ಹೊನ್ನಗಟ್ಟಿ, ಸೊತ್ತೂರು, ದಾವಣಗೆರೆ ಇದೆ. ಅದಲ್ಲದೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಇರಲಿಲ್ಲ, ಅಲ್ಲಿ ಈಗ ಹೊಸದಾಗಿ ಮಂಜೂರು ಮಾಡಿದ್ದೇವೆ. 26 ಮತ್ತು 4 ಒಟ್ಟು 30 ಇದೆ. ಪ್ರತಿಯೊಂದು ಜಿಲ್ಲೆಯಲ್ಲೂ ಇವತ್ತು ಕೃಷಿ ವಿಜ್ಞಾನ ಕೇಂದ್ರಗಳು ಇವೆ. ಅವರು ಏನು ಸಣ್ಣ ರೈತರಿಗೆ ಹಾಗೂ ಮಧ್ಯಮ ರೈತರಿಗೆ ಏನಾದರೂ ಕೊಡಲು ಆಗುತ್ತದೆಯೇ ಎಂದು ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆ. ಬಹುಶಃ ಸಣ್ಣ ರೈತರು ಯಾರೂ ಟ್ರಾಕ್ಟರ್ ತೆಗೆದುಕೊಳ್ಳಲು ಮುಂದೆ ಬರುವುದಿಲ್ಲ. ಅಷ್ಟೊಂದು ಇನ್‌ವೆಸ್ಟ್‌ಮೆಂಟ್ ಮಾಡಲು ಅವರಿಂದ ಸಾಧ್ಯವಾಗುವುದಿಲ್ಲ. ಒಂದು ವೇಳೆ ಸಣ್ಣ ರೈತರು ಯಾರಾದರೂ ತೆಗೆದುಕೊಳ್ಳಲು ಮುಂದೆ ಬಂದರೆ ಅವಕಾಶ ಕೊಡಲು ಸೂಚನೆ ಕೊಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಕೆ.ವಿ.ಕೆ.ಯನ್ನು ಇವ್ಯಾಲಿಯೇಟ್ ಮಾಡಿ ರ‍್ಯಾಂಕಿಂಗ್ ಮಾಡುವ ಬಗ್ಗೆ ಸಲಹೆ ನೀಡಿದೆ. ದಯವಿಟ್ಟು ಇಲಾಖೆಯ ವತಿಯಿಂದ ಅದನ್ನು ಮಾಡಿಸಿ.

ಶ್ರೀ ಗೋವಿಂದ ಎಂ. ಕಾರಜೋಳ : ಅದನ್ನು ಮಾಡೋಣ. ತಮ್ಮ ಸಲಹೆಯನ್ನು ಸರ್ಕಾರ ಒಪ್ಪಿದೆ.

ಫ್ಲೋರೈಡ್ ರಹಿತ ಕುಡಿಯುವ ನೀರಿನ ಸರಬರಾಜು

117(395) ಶ್ರೀ ಶ್ರೀರಾಮರೆಡ್ಡಿ ಜೆ.ವಿ. (ಬಾಗೇಪಲ್ಲಿ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಬಹುತೇಕ ಗ್ರಾಮೀಣ ಜನತೆ ಶುದ್ಧ ಕುಡಿಯುವ ನೀರಿನ ಕೊರತೆಯಿಂದ ಫ್ಲೋರೋಸಿಸ್ ನಂತಹ ಭಯಾನಕ ಕಾಯಿಲೆಗಳಿಗೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಎಲ್ಲಾ ಗ್ರಾಮೀಣ ಜನತೆಗೂ ಫ್ಲೋರೈಡ್ ಮುಕ್ತ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಸರ್ಕಾರ ಉದ್ದೇಶಿಸಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಅ) ಬಂದಿದೆ.

ಆ) ಹೌದು.

ಇ) ಶುದ್ಧ ಕುಡಿಯುವ ನೀರು ಪೂರೈಕೆ ಮಾಡಲು ಭೂಮಿಯ ಮೇಲ್ಪ್ರ ಜಲಮೂಲಗಳನ್ನು ಆಧರಿಸಿ ಸಬ್-ಮಿಷನ್ ಕಾರ್ಯಕ್ರಮದಡಿ 46 ಯೋಜನೆಗಳನ್ನು

ಮಂಜೂರು ಮಾಡಲಾಗಿದ್ದು, 29 ಪೂರ್ಣಗೊಂಡಿವೆ ಹಾಗೂ ಉಳಿದ 17 ಪ್ರಗತಿಯಲ್ಲಿವೆ. ಮಾರ್ಚ್ 2006ರಲ್ಲಿ 170 ಗ್ರಾಮಗಳನ್ನೊಳಗೊಂಡ ರೂ. 71 ಕೋಟಿ ಅಂದಾಜು 27 ಯೋಜನೆಗಳಿಗೆ ಮಂಜೂರಾತಿ ನೀಡಿದೆ. ಸಚೇತನ ಯೋಜನೆಯಡಿಯಲ್ಲಿ ರೂ. 14.50 ಕೋಟಿ ವೆಚ್ಚದಲ್ಲಿ ಫ್ಲೋರೈಡ್ ಬಾಧಿತ 60 ಗ್ರಾಮಗಳಲ್ಲಿ ಸಮುದಾಯದ ಸಹಭಾಗಿತ್ವದೊಂದಿಗೆ ಮನೆ ಮೇಲ್ಛಾವಣೆ ನೀರು ಸಂಗ್ರಹಣೆ ಹಾಗೂ ಭೂಮಿಯ ಮೇಲೆ ಹರಿದು ಹೋಗುವ ಮಳೆ ನೀರು ಸಂಗ್ರಹಣೆ ಮಾಡಿ, ಸುರಕ್ಷಿತ ನೀರು ಪೂರೈಸುವ ವ್ಯವಸ್ಥೆಗಾಗಿ ಅನುಮೋದನೆ ನೀಡಲಾಗಿದೆ. ಜೊತೆಗೆ 200 ಡೀಫ್ಲೋರಿಡೇಷನ್ ಘಟಕಗಳ ಸ್ಥಾಪನೆ ಮತ್ತು 50,000 ಗೃಹೋಪಯೋಗಿ ಡಿಎಫ್ ಫಿಲ್ಟರ್‌ಗಳ ಪೂರೈಕೆ, ಮನೆಯ ಮೇಲ್ಚಾವಣೆ ಮೇಲೆ ಬೀಳುವ ಮಳೆ ನೀರಿನ ಸಂಗ್ರಹಣೆ ಮತ್ತು ಭೂಮಿ ಮೇಲೆ ಹರಿದು ಹೋಗುವ ನೀರನ್ನು ಹಿಂಗಿಸುವಂತಹ ಕಾಮಗಾರಿಗಳಿಗೆ ಮಳೆ ನೀರಿನ ಕೊಯ್ಲು ಆಂದೋಲನದಡಿ ಆದ್ಯತೆ ನೀಡಲಾಗುತ್ತಿದೆ. ಭಾರತ ನಿರ್ಮಾಣ ಕಾರ್ಯಕ್ರಮದಡಿ ಮುಂದಿನ ಮೂರು ವರ್ಷಗಳಲ್ಲಿ ನೀರಿನ ಗುಣಮಟ್ಟದ ಸಮಸ್ಯೆಗಳಿಗೊಳಗಾಗಿರುವ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು. 23683 ಗ್ರಾಮೀಣ ಶಾಲೆಗಳು ಮತ್ತು 23520 ಮನೆಗಳಿಗೆ ಮಳೆ ನೀರು ಕೊಯ್ಲು ಆಂದೋಲನದಡಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ರೂ. 41.76 ಕೋಟಿ ಪಂ.ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡಿದೆ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಇದರಲ್ಲಿ ಇರತಕ್ಕದ್ದು, ಗ್ರಾಮೀಣ ಪ್ರದೇಶದಲ್ಲಿ ಫ್ಲೋರೈಡ್ ರಹಿತ ಶುದ್ಧ ಕುಡಿಯುವ ನೀರನ್ನು ಒದಗಿಸಲು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದಕ್ಕೆ 60 ಗ್ರಾಮಗಳಲ್ಲಿ ಸಮುದಾಯ ಸಹಭಾಗಿತ್ವದಿಂದ ಮನೆ ಮೇಲ್ಚಾವಣೆ ನೀರು ಸಂಗ್ರಹಣೆ ಹಾಗೂ ಭೂಮಿಯ ಮೇಲೆ ಹರಿದು ಹೋಗುವ ಮಳೆ ನೀರನ್ನು ಸಂಗ್ರಹ ಮಾಡಿ ಸುರಕ್ಷಿತ ನೀರು ಪೂರೈಸುವ ವ್ಯವಸ್ಥೆಗಾಗಿ ಅನುಮೋದನೆ ನೀಡಲಾಗಿದೆ ಎಂದು ಉತ್ತರ ಕೊಟ್ಟಿದ್ದೀರಿ ಮತ್ತು 200 ಡೀ–ಫ್ಲೋರೈಡೇಷನ್ ಘಟಕಗಳ ಸ್ಥಾಪನೆ ಮತ್ತು ಐವತ್ತು ಸಾವಿರ ಗೃಹೋಪಯೋಗಿ ಡಿ.ಎ.ಎಫ್. ಫಿಲ್ಟರ್‌ಗಳ ಪೂರೈಕೆ ಮನೆಯ ಮೇಲೆ ಮುಂತಾಗಿ ಹೇಳಿದ್ದೀರಿ. ಆದರೆ ಇವೆಲ್ಲವೂ ಕೂಡ ಸಣ್ಣ ಪ್ರಮಾಣದಲ್ಲಿ ಮಾತ್ರವೆ ಪ್ರಯೋಜನ–ವಾಗುವುದು. ತಾಲ್ಲೂಕುಗಳಲ್ಲಿರತಕ್ಕ ಪ್ರತಿಯೊಂದು ಹಳ್ಳಿಗಳಲ್ಲಿ ಫ್ಲೋರೈಡ್ ಮಿಶ್ರಿತವಾದಂಥ ನೀರಿದೆ. ಅದು ಕುಡಿಯುವುದರಿಂದ ಭಯಂಕರವಾದಂಥ ಫ್ಲೋರಾಸಿಸ್ ಖಾಯಿಲೆ ಬರುತ್ತದೆ. ಇದು ಸಂಪೂರ್ಣವಾಗಿ ವೆಸ್ಟರ್ನ್ ಬೆಲ್ಟ್ ಇದೆಯಲ್ಲ, ರಾಜಸ್ಥಾನದಿಂದ ಪ್ರಾರಂಭವಾಗಿ ನಮ್ಮ ಕೋಲಾರ ಜಿಲ್ಲೆಯಲ್ಲಿ end ಆಗುತ್ತದೆ. ಇಲ್ಲಿ ಎಲ್ಲವೂ ಕೂಡ ಫ್ಲೋರೈಡ್ ಇರತಕ್ಕದ್ದು. ಈ ಫ್ಲೋರೈಡ್ ಕೆಲವು ಕಡೆ 4.6 ಪರ್‌ಸೆಂಟ್ ಇದೆ. ಅದು ಹೈಯಸ್ಟ್, most dangerous. ನೀರಿನಲ್ಲಿ ಫ್ಲೋರೈಡ್ ಕೂಡ one percent is

necessary. But 4.6 percent is most dangerous. ಇಂಥ ಸ್ಥಿತಿಯಲ್ಲಿ ನೀವು ಏನು ಈಗ ಸಲಹೆ ಕೊಟ್ಟಿದ್ದೀರಿ ಇದು ಸರಿಯಲ್ಲ. ಸರಿಯಲ್ಲ ಎಂದರೆ ಇದು ಸರಿಯೇ, ಆದರೆ ಸಂಪೂರ್ಣವಾಗಿ ಎಲ್ಲಾ ವಿಭಾಗದ ಜನರಿಗೆ ಪೂರೈಕೆ ಮಾಡುವುದಕ್ಕೆ ವ್ಯವಸ್ಥೆಯಾಗುವುದಿಲ್ಲ. ಮಳೆ ನೀರಿನ ಕೊಯ್ಲು ಎಂದು ಹೇಳುತ್ತೀರಿ. ಛಾವಣಿ ಮೇಲಿನ ನೀರನ್ನು ಶೇಖರಿಸುವುದು. ಆ ರೀತಿ ಮನೆ ಮೇಲಿನ ನೀರನ್ನು ಶೇಖರಣೆ ಮಾಡಲು ಕೆಲವರ ಮನೆಗಳಿಗೆ ಛಾವಣಿಯೇ ಇಲ್ಲ, ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಅವರು ಏನು ಮಾಡಬೇಕು? ಇಂಥ ಪರಿಸ್ಥಿತಿ ಇದೆ. ಆದ್ದರಿಂದ ಸರ್ಫೇಸ್ ವಾಟರ್ ಅನ್ನು ಕೊಡಲಿಕ್ಕೆ ಪ್ರಯತ್ನ ಮಾಡಬೇಕು. ಇದನ್ನು ಮಾಡಲು ಸರ್ಕಾರ ಏನು ಕಾರ್ಯಕ್ರಮ ಇಟ್ಟುಕೊಂಡಿದೆ? ಕೇವಲ ಮಳೆ ಕೊಯ್ಲು, ಫಿಲ್ಟರ್‌ಗಳಿಂದ ಇದು ಸಾಧ್ಯವಾಗುವುದಿಲ್ಲ. ಫಿಲ್ಟರ್‌ಗಳನ್ನು ಮೇನ್‌ಟೇನ್ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಎಕ್ಸಪರ್‌ಮೆಂಟ್ ಮಾಡಿ ಫೇಲ್ಯುರ್ ಆಯಿತು. ಆದ್ದರಿಂದ ಸರ್ಫೇಸ್ ವಾಟರ್, ಕೆರೆಯ ನೀರು, ಸಣ್ಣ ಸಣ್ಣ ಡ್ಯಾಂಗಳನ್ನು ನಿರ್ಮಾಣ ಮಾಡಿ ನೀರನ್ನು ಕೊಡತಕ್ಕದ್ದು. ಈ ರೀತಿಯ ಕೆಲಸಕ್ಕೆ ಏನು ಕಾರ್ಯಕ್ರಮ ಹಾಕುತ್ತೀರಿ? ಆ ರೀತಿ ಏನಾದರೂ ನಿಮ್ಮ ಯೋಜನೆಯಲ್ಲಿ ಇದೆಯೆ? ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಸನ್ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ. ರಾಜ್ಯದಲ್ಲಿ ಸುಮಾರು 21 ಸಾವಿರ ಜನ ವಸತಿಗಳಲ್ಲಿ ಶುದ್ಧವಾದಂತಹ ಮತ್ತು ಸುರಕ್ಷಿತವಾದಂತಹ ನೀರು ಕೊಡಲಿಕ್ಕೆ ಇವತ್ತು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಆ ನಿಟ್ಟಿನಲ್ಲಿ ಇವತ್ತು ನಾವು ಮಾಡಬೇಕಾದುದು ಒಂದೇ, ಮಳೆ ನೀರಿನ ಕೊಯ್ಲು, ಮಳೆ ನೀರನ್ನು ನಾವು ಸಂಗ್ರಹಣೆ ಮಾಡಿ ಭೂಮಿಯಲ್ಲಿ ಇಂಗಿಸತಕ್ಕಂಥ ಕಾರ್ಯಕ್ರಮ ಮತ್ತು ಮಳೆ ನೀರನ್ನು ಹಿಡಿದಿಟ್ಟುಕೊಳ್ಳುವಂತಹ ಕಾರ್ಯಕ್ರಮ ಮತ್ತು ಯಾವ್ಯಾವ ಜಿಲ್ಲೆಗಳಲ್ಲಿ ಮತ್ತು ಊರುಗಳಲ್ಲಿ ನದಿಗಳು ಇದೆಯೋ, ಕೆರೆಗಳು ಇವೆಯೋ, ಆ ನೀರನ್ನು ಉಪಯೋಗ ಮಾಡಿಕೊಂಡು surface water ನ multi village schemeಗಳನ್ನು ಈಗಾಗಲೇ ಮಂಜೂರು ಮಾಡಲಿಕ್ಕೆ ಪ್ರಾರಂಭ ಮಾಡಿದ್ದೇವೆ. ಈಗ multi village scheme ಅನ್ನು ಮಾಡುವುದೊಂದೇ ದಾರಿ. 4–8 ಹಳ್ಳಿಗಳನ್ನು ಸೇರಿಸಿ, 10–20 ಹಳ್ಳಿಗಳನ್ನು ಸೇರಿಸಿ, ಎಲ್ಲೆಲ್ಲಿ ನದಿ ಮೂಲ ಇದೆಯೋ, ಎಲ್ಲೆಲ್ಲಿ ಕೆರೆಗಳು ಇದೆಯೋ, ಎಲ್ಲೆಲ್ಲಿ ಭೂಮಿ ಮೇಲ್ಭಾಗದಲ್ಲಿ ನೀರು ಸಿಗುತ್ತದೋ, ಅಂತಹ ನೀರನ್ನು ನಾವು ಕೊಡುವುದರ ಮೂಲಕ ಇವತ್ತು ಫ್ಲೋರೈಡ್ ಸಮಸ್ಯೆ ಆಗಿರಬಹುದು. ಲವಣದ ಸಮಸ್ಯೆ ಆಗಿರಬಹುದು, ಕಬ್ಬಿಣದ ಸಮಸ್ಯೆ ಆಗಿರಬಹುದು, ಸುರಕ್ಷಿತವಾದಂತಹ ನೀರನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅದಕ್ಕಾಗಿ ಇವತ್ತು ಸರ್ಕಾರ ನಿರ್ದಿಷ್ಟವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿಕ್ಕೆ ಈಗಾಗಲೇ ಈ ಆಯವ್ಯಯದಲ್ಲಿ ಹೆಚ್ಚು ಹಣವನ್ನು ಇಟ್ಟಿದೆ. ಕುಡಿಯುವ ನೀರಿನ ಯೋಜನೆಗಳು ಶೇಕಡ 95ರಷ್ಟು ರಾಜ್ಯದಲ್ಲಿ ಎಲ್ಲವೂ

under ground water ಮೇಲೆ depend ಇರತಕ್ಕಂಥವು ಆಗಿವೆ. ಭೂಮಿಯ ಒಳಗಿನ ನೀರನ್ನು ಉಪಯೋಗ ಮಾಡಿ ಇವತ್ತು ನಾವು ಶೇಕಡ 95ರಷ್ಟು ಜನ ವಸತಿಗಳಿಗೆ ಕುಡಿಯುವ ನೀರನ್ನು ಕೊಡುತ್ತಿದ್ದೇವೆ. ಅದಕ್ಕಾಗಿ ನಾವು ಈಗ ಮುಂಬರುವ ದಿನಗಳಲ್ಲಿ ಹೆಚ್ಚು ಸುರಕ್ಷಿತವಾದಂತಹ ಮತ್ತು ಶುದ್ಧವಾದಂತಹ ಕುಡಿಯುವ ನೀರಿಗಾಗಿ multi village schemeಗಳಿಗೆ encouragement ಮಾಡುತ್ತಿದ್ದೇವೆ. ನಾನು ನನ್ನ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಯಾವುದೇ ಒಂದು ಕುಡಿಯುವ ನೀರಿನ ಯೋಜನೆಯನ್ನು ಮಾಡಿದರೆ, ಎಲ್ಲಿ ಕೊಳವೆ ಬಾವಿ ಹಾಕಿ ಈ ಯೋಜನೆ ಜಾರಿ ಮಾಡುತ್ತೀರೋ, part of the estimate, ಒಂದು ನಾಲಾ ಬಂಡಿಂಗೋ, ಬಾಂದಾರನೋ ಮತ್ತು ಕೆರೆಗಳಿಗೆ ಮಾಡತಕ್ಕಂಥದ್ದು, ಗೋಕಟ್ಟೆಗಳನ್ನು ಮಾಡತಕ್ಕಂಥದ್ದು, ಅದರ ಜೊತೆಯಲ್ಲಿ ಎಲ್ಲಿ ಸಾಧ್ಯ ಇದೆಯೋ, ಮಳೆ ನೀರನ್ನು ಬೋರ್‌ನ ಪಕ್ಕದಲ್ಲಿ ಇಂಗಿಸಲಿಕ್ಕೆ ವ್ಯವಸ್ಥೆ ಮಾಡತಕ್ಕಂಥದ್ದು ಮಾಡಬೇಕು. ಅದು part of the estimate ಆಗಬೇಕು ಎಂದು ಹೇಳಿದ್ದೇನೆ. ಇದರಿಂದ estimate cost ಜಾಸ್ತಿಯಾಗುತ್ತದೆ ಎಂದು ಅಧಿಕಾರಿಗಳು ಹೇಳಿದಾಗ, ಜಾಸ್ತಿಯಾದರೂ ಪರವಾಗಿಲ್ಲ, ಇದನ್ನು ಮಾಡಲೇಬೇಕು ಎಂದು ನಾನು ಹೇಳಿದ್ದೇನೆ. ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಈ ಮನೆಯ ಎಲ್ಲಾ ಸದಸ್ಯರಿಗೂ ಮತ್ತು ಈ ನಾಡಿನ ಜನರಿಗೆ ನಾನು ಹೇಳಲಿಕ್ಕೆ ಬಯಸುವುದೇನೆಂದರೆ, ಮಳೆಯ ನೀರನ್ನು ಕೊಯ್ಲು ಮಾಡದೆ ಹೋದರೆ, ಭೂಮಿಯಲ್ಲಿ ಇರತಕ್ಕಂಥ ನೀರಿನ ಪ್ರಮಾಣ ಮೇಲ್ಪಟ್ಟಕ್ಕೆ ಬರದೇ ಹೋದರೆ, under ground water recharge ಆಗದೇ ಹೋದರೆ, ಇವತ್ತು ಈ ಸಮಸ್ಯೆ ಪರಿಹಾರವಾಗಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಇವತ್ತು ಜನ ಮತ್ತು ಸರ್ಕಾರ ಜಂಟಿಯಾಗಿ ಕೆಲಸ ಮಾಡಿದಾಗ ಮಾತ್ರ ಈ ಸಮಸ್ಯೆ ಪರಿಹಾರವಾಗುತ್ತದೆ. ಮುಂಬರುವ ದಿನಗಳಲ್ಲಿ, ಬಹುಶಃ 3–4 ವರ್ಷಗಳಲ್ಲಿ ನಾವು ಹೆಚ್ಚು ಈ ಕಾರ್ಯಕ್ರಮಗಳನ್ನು ಹಾಕಿಕೊಂಡು, ಭೂಮಿಯಲ್ಲಿ ಇರತಕ್ಕಂಥ ನೀರಿನ ಮಟ್ಟವನ್ನು ಮೇಲಕ್ಕೆ ತರುವುದಕ್ಕೂ ಮತ್ತು ವ್ಯರ್ಥವಾಗಿ ಹರಿದು ಹೋಗತಕ್ಕಂಥ ನೀರನ್ನು ಹಿಡಿದಿಡುವಂತಹ ಕಾರ್ಯಕ್ರಮ, ನಾವು ಎಲ್ಲವನ್ನೂ ಮಾಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸಚಿವರೆ, ನೀವು ಬಜೆಟ್‌ನಲ್ಲಿ ಕುಡಿಯುವ ನೀರಿನ ಯೋಜನೆಗಳಿಗಾಗಿ 750 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ನಮ್ಮ ಕರ್ನಾಟಕ ರಾಜ್ಯದಲ್ಲಿ ಫ್ಲೋರೈಡ್ ಮಿಶ್ರಿತ ನೀರು ಯಾವ್ಯಾವ ತಾಲ್ಲೂಕುಗಳಲ್ಲಿ ಇದೆಯೋ, ಆ ತಾಲ್ಲೂಕುಗಳಿಗೇನಾದರೂ ಶುದ್ಧವಾದಂತಹ ಫ್ಲೋರೈಡ್‌ರಹಿತವಾದಂತಹ ನೀರನ್ನು ಕೊಡಬೇಕಾದರೆ ನೀವು ಇಟ್ಟಿರತಕ್ಕಂಥ ಈ 750 ಕೋಟಿ ರೂಪಾಯಿಗಳ ಹಣ ಸಾಕಾಗುವುದಿಲ್ಲ. ಇಡೀ ರಾಜ್ಯಕ್ಕೋಸ್ಕರ ಅಷ್ಟು ಹಣವನ್ನು ನೀವು ಬಜೆಟ್‌ನಲ್ಲಿ ಇಟ್ಟಿದ್ದೀರಿ. ನಾನು ಹೇಳುವುದೇನೆಂದರೆ, Minor irrigationನವರು ಈಗ ಟ್ಯಾಂಕ್‌ಗಳ ತೂಬುಗಳನ್ನು close ಮಾಡಿದ್ದಾರೆ. ಆ ಟ್ಯಾಂಕ್‌ಗಳಲ್ಲಿ ನೀರು ಶೇಖರಣೆಯಾಗಿದೆ. ಕೆಲವು ಕಡೆ

ದೊಡ್ಡ ದೊಡ್ಡ ಕೆರೆಗಳಿವೆ. ನನ್ನ ಕ್ಷೇತ್ರವೊಂದರಲ್ಲೇ ಅಂತಾದ್ದು ಸುಮಾರು 4–5 ಇವೆ. ನೀವು ಅಲ್ಲಿಂದ ಪೈಪ್‌ಲೈನ್ಸ್ ಹಾಕಿ, filter treatment plants ಅನ್ನು ready ಮಾಡಿಸಿ, ಶುದ್ಧ ನೀರನ್ನು supply ಮಾಡಲಿಕ್ಕೆ ಸಾಧ್ಯತೆ ಇದೆ. ಅದು ಎಲ್ಲೆಲ್ಲಿ ಮಾಡಲಿಕ್ಕೆ ಸಾಧ್ಯತೆ ಇದೆ ಎಂಬುದನ್ನು ನೀವು ಪರಿಶೀಲನೆ ಮಾಡಿ, ಅದಕ್ಕೆ ಹಣ ನಿಗದಿ ಮಾಡಿದರೆ ಹೆಚ್ಚಿನ ಸಮಸ್ಯೆ ಪರಿಹಾರವಾಗುತ್ತದೆ. ಅದಕ್ಕೆ ಸರ್ಕಾರದವರು ಹಣವನ್ನು ಪ್ರತ್ಯೇಕವಾಗಿ ತೆಗೆದು ಇಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾವು ಹಿಂದೊಂದು ಸಲ ಸಜೆಸ್ಟ್ ಮಾಡಿದ್ದೆವು. ಮಾನ್ಯ ಈಶ್ವರಪ್ಪನವರ ಗಮನವನ್ನು ನಾನು ಸೆಳೆಯುತ್ತಿದ್ದೇನೆ. ತಾವು ಏನಾದರೂ ಮಾಡಿ ಹೇಮಾವತಿ ಕೆನಾಲ್ ಹೋಗುವ ಕಡೆ, ಈ ಕೆರೆಗಳನ್ನು ಕುಡಿಯುವ ನೀರಿಗೆ ಎಂದು ಮೀಸಲಿಟ್ಟುಕೊಂಡು, ರೈತರಾದ ನಾವೆಲ್ಲಾ ಒಪ್ಪಿಕೊಳ್ಳುತ್ತೇವೆ, ಶೇಖರಣೆ ಮಾಡಿ underground water level ಅನ್ನು rise ಮಾಡಲಿಕ್ಕೆ ಪ್ರಯತ್ನ ಮಾಡದೆ ಹೋದರೆ, ತುಮಕೂರು, ಚಿತ್ರದುರ್ಗ ಮತ್ತು ಕೋಲಾರದಲ್ಲಿ ಇರುವಂತಹ ಈ ಫ್ಲೋರೈಡ್ content ಕಡಿಮೆಯಾಗುವುದಿಲ್ಲ. ಬೋರ್‌ವೆಲ್‌ಗಳನ್ನು ನಾವು ಎಷ್ಟು ಕೊರೆದರೂ ಸರ್ಕಾರ ನೀರು ಒದಗಿಸುವುದಕ್ಕಾಗುವುದಿಲ್ಲ. ಈಗ ನಾನು 2–3 ಕೆರೆಗೆ permission ಕೇಳಿದ್ದೇನೆ, ನಿಮ್ಮವರು WRDOನವರು ಕಾವೇರಿ dispute ನಲ್ಲಿ ಬರುತ್ತದೆ, ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. drinking waterಗೂ ಕೊಡುವುದಕ್ಕಾಗುವುದಿಲ್ಲ ಎನ್ನುತ್ತಾರೆ. ನಾವು particularly, ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರು, ಆ maintenance of lift irrigantionಗೆ mines ನವರು, ಅವರಿವರನ್ನು Committee ಮಾಡಿ, ದುಡ್ಡು ಕಟ್ಟಲಿಕ್ಕೆ ಕೂಡ ಕೇಳಿದ್ದೇವೆ. Scheme ಮಾಡಿ, ಅಲ್ಲಿರುವಂತಹ ದೊಡ್ಡ ದೊಡ್ಡ ಕೆರೆಗಳಿಗೇನಾದರೂ ಮಾಡಿ, ಆ ಹೇಮಾವತಿ ನಾಲೆ ಹೋಗುವ ಕಡೆ ಅಥವಾ ಬೇರೆ ಕೆನಾಲ್‌ಗಳು ಹೋಗುವ ಕಡೆ ಕೆರೆಗಳನ್ನು ತುಂಬಿಸಲಿಕ್ಕೆ ವ್ಯವಸ್ಥೆ ಮಾಡಿದರೆ ಮಾತ್ರ ಈ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಒಂದು ಹದಕ್ಕೆ ತರಬಹುದು. ಇದಕ್ಕೆ ತಾವು ಏನು ಅಭಿಪ್ರಾಯ ಪಡುತ್ತೀರಿ? ಸರ್ಕಾರ ಇದಕ್ಕೆ ಯಾವುದಾದರೂ ಒಂದು ಒಳ್ಳೆಯ scheme ಹಾಕಿಕೊಳ್ಳಬೇಕಾಗಿದೆ. ಇದಕ್ಕೆ ತಾವು ಉತ್ತರ ಹೇಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಈ ಸಮಸ್ಯೆಗೋಸ್ಕರವೇ ಮಾನ್ಯ ಪರಮಶಿವಯ್ಯ ವರದಿಯ ಆಧಾರದ ಮೇಲೆ Western Ghats ನಲ್ಲಿ ಹರಿದು ಹೋಗುತ್ತಿರತಕ್ಕಂಥ ನೀರನ್ನು ಪೂರ್ವಕ್ಕೆ ತಿರುಗಿಸಿ, ಏಳು ಜಿಲ್ಲೆಗಳಿಗೆ ಕೊಡತಕ್ಕಂಥ ಯೋಜನೆಗೆ ಈಗ ಸರ್ವೆ ಕಾರ್ಯ ನಡೆಯುತ್ತಿದೆ, ಅದು almost finishing stage ಗೆ ಬಂದಿದೆ. ಅದನ್ನು ನೀವು ಗಂಭೀರವಾಗಿ ಪರಿಶೀಲನೆ ಮಾಡಿ. ಹಿಂದಿನ ಸರ್ಕಾರ 15 ಕೋಟಿ ರೂಪಾಯಿಗಳನ್ನು ಕೊಟ್ಟು ಸರ್ವೆ ಎಲ್ಲಾ ಮುಗಿಯುವ ಸ್ಟೇಜಿಗೆ ಬಂದಿದೆ, ಅದು ಮತ್ತು ಮಾನ್ಯ ಮಾಧುಸ್ವಾಮಿಯವರು ಹೇಳಿದಂತಹ ಕೆಲಸ ಮಾಡಿದರೆ, ನಮ್ಮ ಈ ನಾಲ್ಕೈದು ಜಿಲ್ಲೆಗಳ

ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬಹುದು. ನಾವು ಕುಡಿಯುವ ನೀರಿಗೆ ಮಾತ್ರ ಕೇಳುತ್ತಿದ್ದೇವೆ ಬೇರೆಯದಕ್ಕೆ ಅಲ್ಲ ನಮಗೆ ಕುಡಿಯುವ ನೀರಿಗೆ ಕೊಡಿ. ಬೇರೇನು ಕೊಡದಿದ್ದರೂ ಚಿಂತೆ ಇಲ್ಲ. ಕುಡಿಯುವ ನೀರಿಗೆ ಕೊಟ್ಟರೆ, ನಮ್ಮ ಸಮಸ್ಯೆ ಪರಿಹಾರವಾಗುತ್ತದೆ. ಕುಡಿಯುವ ನೀರಿಗೋಸ್ಕರ ಕೆರೆಗಳನ್ನು ತುಂಬಿಸಬೇಕು. ಆ ಯೋಜನೆಯನ್ನು ದಯವಿಟ್ಟು ಜಾರಿ ಮಾಡಲಿಕ್ಕೆ ಸರ್ಕಾರ ಏನು ಕ್ರಮವನ್ನು ಈಗ ತೆಗೆದುಕೊಳ್ಳುತ್ತದೆ? ಸರ್ವೆ ಕಾರ್ಯ ಈಗ ನಡೆಯುತ್ತಿದೆ.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಫ್ಲೋರೈಡ್ ಸಮಸ್ಯೆ ಏನಿದೆಯೋ, ಇದು ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ, ಪಂಜಾಬ್, ರಾಜಾಸ್ಥಾನ್, ಮಧ್ಯಪ್ರದೇಶ, ಆಂಧ್ರ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಬಂದಿರತಕ್ಕಂಥ ಒಂದು ದೊಡ್ಡ ಸಮಸ್ಯೆಯಾಗಿದೆ. ಇದಕ್ಕೆ ಏನು ಸಲಹೆಗಳನ್ನು ಅವರು ಕೊಟ್ಟಿದ್ದಾರೋ, ಅವು ಚೆನ್ನಾಗಿವೆ. ನಾನು ಎಲ್ಲೋ ಒಂದು ಕಡೆ ಓದಿದ್ದೆ. ಪಂಜಾಬ್ ಸರ್ಕಾರ, ಉರುಗ್ವೆ Government ಜೊತೆಗೆ ಸೇರಿಕೊಂಡು, ಅವರೊಂದಿಗೆ ಒಪ್ಪಂದ ಮಾಡಿಕೊಂಡು, de-fluorination plants ಎಂದು ಮಾಡಿದ್ದಾರೆ. ಅಂತಹದ್ದನ್ನು ಪಂಜಾಬ್ ರಾಜ್ಯದಲ್ಲಿ 20 ಕಡೆಗಳಲ್ಲಿ ಹಾಕಿದ್ದಾರಂತೆ. ಅಂತಹ ಒಂದೊಂದು ಪ್ಲಾಂಟ್ ಮುಖಾಂತರ ಸುಮಾರು 1 ಲಕ್ಷ ಲೀಟರ್‌ಗಳಷ್ಟು ನೀರನ್ನು purify ಮಾಡತಕ್ಕಂಥ ಯೋಜನೆ ಅಲ್ಲಿ ಪ್ರಾರಂಭವಾಗಿದೆ. ಅದನ್ನು ಯಾವ ರೀತಿಯಾಗಿ ಇಲ್ಲೂ ಮಾಡಲಿಕ್ಕೆ ಆಗುತ್ತದೆ ಎಂಬುದನ್ನು ಮಾನ್ಯ ಸಚಿವರು ಸ್ವಲ್ಪ ನೋಡಬೇಕು. ಏಕೆಂದರೆ, ಇದಕ್ಕೆ ಪರಿಹಾರ ಬಹಳ ಕಷ್ಟ. ಕೋಲಾರದಲ್ಲಿ ನೀರು ಸಿಗುವಂತದ್ದೇ ಕಷ್ಟ. ಅಲ್ಲಿನ ಕೊಳವೆ ಬಾವಿಗಳಿಂದ ಬರತಕ್ಕಂಥ ನೀರು ಫ್ಲೋರೋಸಿಸ್ ಆಗಿರುತ್ತದೆ. ಆದ್ದರಿಂದ ಇದನ್ನು ಮುಂದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಇದನ್ನು ತಾವು ಸ್ವಲ್ಪ ಗಮನಕ್ಕೆ ತೆಗೆದುಕೊಂಡು, ನಮ್ಮಲ್ಲೂ ಅದನ್ನು ಮಾಡುವುದ-ಕ್ಕಾಗುತ್ತದೆಯೇ? ಎಂದು ಆಲೋಚನೆ ಮಾಡಬೇಕು. ಎರಡನೆಯದಾಗಿ, ಫ್ಲೋರೈಸಿಸ್ ಖಾಯಿಲೆ ಏನಿದೆಯೋ, ಇದನ್ನು ನಾವು ಬೇಗ ಕಂಡು ಹಿಡಿದರೆ ಗುಣಪಡಿಸಬಹುದಾಗಿದೆ. ಆದರೆ ನಾವು ಅದನ್ನು ಬೇಗ ಕಂಡು ಹಿಡಿಯದೆ ಹೋದರೆ, ಅದನ್ನು permanent ಆಗಿ ಗುಣ ಮಾಡಲಿ-ಕ್ಕಾಗುವುದಿಲ್ಲ. ತೀರಾ ತಡವಾಗಿ ನಾವು ಅದನ್ನು ಕಂಡು ಹಿಡಿದರೆ, ಅದನ್ನು ಗುಣ ಮಾಡಲಿ-ಕ್ಕಾಗುವುದಿಲ್ಲ. ಆದ್ದರಿಂದ ಅಂತಹ ವ್ಯಕ್ತಿಗಳಿಗೆ ತುಂಬಾ ತೊಂದರೆಯಾಗುತ್ತದೆ. ಏಕೆಂದರೆ ಕೆಲವು ಜನಕ್ಕೆ Dental Flurosis ಆಗುತ್ತದೆ. Skeletal Flurosis ಕೂಡ ಆಗುತ್ತದೆ ಎಂದು ಹೇಳುತ್ತಾರೆ. Skeletal Flurosis ಆಗತಕ್ಕಂಥವರಿಗೆ ಏನು ಕೆಲಸವನ್ನೂ ಕೂಡ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರ, ಅಂತಹ ಯಾರು Permanent ಆಗಿ affect ಆಗಿರತಕ್ಕಂಥ ಜನರಿದ್ದಾರೋ, ಅಂತಹವರಿಗೆ ಏನಾದರೂ ಒಂದು pension ಕೊಡತಕ್ಕಂಥದ್ದಾಗಲಿ ಅಥವಾ ಇನ್ನೇನಾದರೂ ಒಂದು ಸ್ಕೀಮ್ ಅನ್ನು ಹಾಕಿಕೊಳ್ಳಬೇಕು.

ಇಲ್ಲದಿದ್ದರೆ ತುಂಬಾ ತೊಂದರೆಯಾಗುತ್ತದೆ. ಅವರಿಗೆ ಜೀವನ ನಡೆಸಲಿಕ್ಕೆ ಕೂಡ ಬಹಳ ಕಷ್ಟವಾಗುತ್ತದೆ. ಅಂತಹವರಿಗೆ ಸರ್ಕಾರ ಸಹಾಯ ಮಾಡತಕ್ಕಂಥದ್ದನ್ನೂ ಕೂಡ ಮಾಡಬೇಕು ಎಂದು ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಎಲ್ಲರೂ ಹೀಗೆ ಎದ್ದರೆ ಆಗುವುದಿಲ್ಲ ಮಾನ್ಯ ಮಂತ್ರಿಗಳು ಉತ್ತರ ಹೇಳಲಿ. ಆಮೇಲೆ clarification ಏನಾದರೂ ಇದ್ದರೆ ಕೇಳುವಿರಂತೆ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ಅದಕ್ಕೆ ಸಂಬಂಧಪಟ್ಟಂತೆಯೇ ನಾನೂ ಒಂದು ವಿಷಯವನ್ನು ಪ್ರಸ್ತಾಪಿಸುತ್ತೇನೆ. ಅದನ್ನೂ ಸೇರಿ ಮಾನ್ಯ ಸಚಿವರು ಉತ್ತರ ಕೊಡಬಹುದು. ಮೊನ್ನೆ ನಾವೊಂದು ನಿಯೋಗ ಹೋಗಿ ಮಾನ್ಯ ನೀರಾವರಿ ಸಚಿವರಿಗೆ ಮನವಿ ಮಾಡಿದ್ದೇವೆ. ನಮ್ಮ ಚಿತ್ರದುರ್ಗ ಜಿಲ್ಲೆಯ ನಗರ, ಪಟ್ಟಣ ಪ್ರದೇಶದ ಜನರು ಶುದ್ಧವಾದ ನೀರನ್ನು ಕುಡಿದು ಆರೋಗ್ಯವಂತರಾಗಿದ್ದಾರೆ. ಆದರೆ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ, ಅದರಲ್ಲೂ ವಿಶೇಷವಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಯಾವುದೇ ಒಂದು ನದಿ ಕೂಡ ಹರಿಯುತ್ತಿಲ್ಲ. ಎಲ್ಲಾ ಬೋರ್‌ವೆಲ್‌ಗಳಲ್ಲೂ ಕೂಡ ಫ್ಲೋರೈಡ್ ಅಂಶದ ನೀರು ಇರುವುದರಿಂದ, ಆ ನೀರನ್ನು ಕುಡಿದು ದಿನಾ ಅಲ್ಲಿನ ಜನ ಸಾಯುತ್ತಿದ್ದಾರೆ. ಯಾವ ಆಸ್ಪತ್ರೆಗೆ ಹೋದರೂ ಕೂಡ ರೋಗಿಗಳಿದ್ದಾರೆ, ಅವರು ಗುಣಮುಖರಾಗಬೇಕು, ಅವರಿಗೆ ಶುದ್ಧವಾದ ಒಳ್ಳೆಯ ನೀರನ್ನು ಕೊಡಬೇಕೆಂಬ ಇಚ್ಛೆ ನಿಮಗೆ ಇದ್ದರೆ, ಗ್ರಾಮೀಣ ಪ್ರದೇಶದ ಜನರಿಗೆ, Upper ಭದ್ರಾದಿಂದ ನೀವು ಎಲ್ಲಾ ಕೆರೆಗಳನ್ನೂ ತುಂಬಿಸಿ. ಕುಡಿಯುವ ನೀರನ್ನು ನೀವು ಕೊಡಿ. ಅದೇ ರೀತಿಯಾಗಿ ತುಂಗಭದ್ರಾ ನದಿಯಿಂದ ಒಂದು ಪ್ರಾಜೆಕ್ಟ್ ಅನ್ನು ನಾವು ಕೊಟ್ಟಿದ್ದೇವೆ. ಚಿತ್ರದುರ್ಗ ತಾಲ್ಲೂಕು, ದಾವಣಗೆರೆ ತಾಲ್ಲೂಕು, ಜಗಳೂರು ತಾಲ್ಲೂಕಿನ ಕೆರೆಗಳನ್ನು ತುಂಬಿಸಬೇಕು ಎಂದು ನಾವು ಹೇಳಿದ್ದೇವೆ. ಅದರಿಂದ ಎಲ್ಲೆಲ್ಲಿ ಸಾಧ್ಯವೋ, Upper ಭದ್ರಾ ಮತ್ತು ತುಂಗಭದ್ರಾ ನದಿಯಿಂದ ಈ ಕೆರೆಗಳನ್ನು ತುಂಬಿಸುವುದರ ಮೂಲಕ ಹಳ್ಳಿಗಾಡಿನ ಜನರಿಗೆ ಶುದ್ಧವಾದ ಕುಡಿಯುವ ನೀರನ್ನು ಕೊಟ್ಟು ಅವರನ್ನು ಆರೋಗ್ಯವಂತರನ್ನಾಗಿ ಮಾಡಲಿಕ್ಕೆ ಈ ಸರ್ಕಾರಕ್ಕೆ ಸಾಧ್ಯತೆ ಇದೆ. ಆ ಕೆಲಸವನ್ನು ಮಾಡಬೇಕೆಂದು ನಾನು ಕೋರುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) : ಮಾನ್ಯ ಅಧ್ಯಕ್ಷರೆ, ನಮ್ಮ ಸ್ನೇಹಿತರಾದ ಮಾನ್ಯ ಮಾಧುಸ್ವಾಮಿಯವರು, ಮಾನ್ಯ ಶ್ರೀರಾಮರೆಡ್ಡಿಯವರು, ಮಾನ್ಯ ಆಂಜನೇಯರವರು ಮತ್ತು ಮಾನ್ಯ ದಿನೇಶ್ ಗುಂಡೂರಾವ್‌ರವರು, ಎಲ್ಲರೂ ಪ್ರಸ್ತಾಪ ಮಾಡಿದ್ದನ್ನು ನಾನು ಗಮನಿಸಿದ್ದೇನೆ. ನಾನು ಮಂತ್ರಿಯಾದ ತಕ್ಷಣ ಇದೇ ರೀತಿಯಾಗಿ ಎಲ್ಲಾ ನಮ್ಮ ಶಾಸಕರೂ ಕೂಡ ವಿಶೇಷವಾಗಿ ಅವರವರ ಭಾಗದಲ್ಲಿ ಕುಡಿಯುವ

ನೀರಿನ ಬಗ್ಗೆ ಸಾಕಷ್ಟು ನನ್ನ ಗಮನಕ್ಕೆ ತಂದಿದ್ದಾರೆ. ಜೊತೆಗೆ ಕೆಲವು ಭಾಗದಲ್ಲಿ lift irrigation ಬಗ್ಗೆಯೂ ಕೂಡ ನನ್ನ ಗಮನಕ್ಕೆ ತಂದಿದ್ದಾರೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು Krishna basin ಬಗ್ಗೆ, ಕಾವೇರಿ ಬೇಸಿನ್ ಬಗ್ಗೆ, ಎಲ್ಲಾ ಸ್ಟಡಿ ಮಾಡಿದಾಗ, ತಮಗೆಲ್ಲಾ ಗೊತ್ತಿರುವಂತೆ ಒಂದಲ್ಲಾ ಒಂದು ಟ್ರಿಬ್ಯೂನಲ್‌ನಲ್ಲಿ (ಎ) ಸ್ಕೀಮ್ ಬಗ್ಗೆ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಈ ಒಂದು ಪರಿಸ್ಥಿತಿ ಇರುವಂತಹ ಸಂದರ್ಭದಲ್ಲಿ ನಮಗೆಲ್ಲರಿಗೂ ಗೊತ್ತಿರುವಂತೆ ಆಗಸ್ಟ್ ತಿಂಗಳಿನಲ್ಲಿ ಆ ಟ್ರಿಬ್ಯೂನಲ್ ಹೆಚ್ಚು ಕಡಿಮೆ ತೀರ್ಮಾನಕ್ಕೆ ಬರುವುದಿದೆ. ಅದರ ಬಗ್ಗೆ ಒಂದು ಕಡೆ ಗಮನ ಹರಿಸಿಕೊಂಡು, ಅದು ಮುಗಿಯುತ್ತಿದ್ದಂತೆ, ನಮಗೆ (ಬಿ) ಸ್ಕೀಮ್‌ಗೆ ಹೋಗುವಂತಹ ಅವಕಾಶಗಳು ತುಂಬಾ ಜಾಸ್ತಿ ಇದೆ. ವಿಶೇಷವಾಗಿ ಕುಡಿಯುವ ನೀರಿನ ಬಗ್ಗೆ ಎಲ್ಲಾ ಭಾಗಗಳಲ್ಲಿಯೂ ಕೂಡ ಈ ಸಮಸ್ಯೆ ಇದೆ. ಜೊತೆಗೆ ನಮ್ಮ ಸ್ನೇಹಿತರು ಹೇಳಿದ ಹಾಗೆ ಪರಮಶಿವಯ್ಯನವರ ವರದಿಯನ್ನು ಕೂಡ ನಾನು ಇದರ ಬಗ್ಗೆ ಏನು ಮಾಡಬೇಕೆನ್ನುವುದರ ಬಗ್ಗೆ ಸ್ಟಡಿ ಮಾಡುತ್ತಿದ್ದೇನೆ. ಕುಡಿಯುವ ನೀರಿನ ಬಗ್ಗೆ ನಮಗೆ ಹಣಕಾಸಿನ ಸಮಸ್ಯೆ ಏನೂ ಇಲ್ಲ. ಸಮಸ್ಯೆ ಇರುವುದು ಈ ರೀತಿ ಸಣ್ಣ ಪುಟ್ಟ ಸಮಸ್ಯೆಗಳು ಇವೆ. ಕೆಲವು ಕಡೆ ಎಕ್ಸಸ್ ವಾಟರ್ ಇರುವ ಭಾಗದ ಸಮಸ್ಯೆ ಇದೆ. ಅದನ್ನೂ ಕೂಡ ಗಮನಿಸಿ, ವಿಶೇಷವಾಗಿ ಯಾವ ಯಾವ ಭಾಗದಲ್ಲಿ ನೀರಿನ ತೊಂದರೆಗಳಿವೆ ಎಂದು ಅನ್ನಿಸುತ್ತದೆ ಅಲ್ಲಿಗೆ ಸಂಬಂಧಪಟ್ಟ ಶಾಸಕರುಗಳ ಜೊತೆ ಕೂತು ಚರ್ಚೆ ಮಾಡಿ ಕುಡಿಯುವ ನೀರಿನ ಸಮಸ್ಯೆ ಪರಿಹಾರ ಮಾಡುವುದಕ್ಕೆ ಖಂಡಿತ ನಾನು ಗಮನ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಮೋಹನ್ ಕೃಷ್ಣ ಶೆಟ್ಟಿ, ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕೇಳುವವರೂ ಇಲ್ಲ, ಹೇಳುವವರೂ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಾನು ಆಥರೈಸ್ ತೆಗೆದುಕೊಂಡಿದ್ದೇನೆ ಉತ್ತರ ಹೇಳುತ್ತೇನೆ.

ಗ್ರಾಮ ಪಂಚಾಯಿತಿಗಳಿಗೆ ಪಡಿತರ ಚೀಟಿ ಹಂಚುವಿಕೆ

119(386) ಶ್ರೀ ಪಾಟೀಲ್ ಡಿ.ಆರ್. (ಗದಗ): ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಬಡ ಜನರಿಗೆ ಆಹಾರಧಾನ್ಯಗಳನ್ನು ಕಡಿಮೆ ದರದಲ್ಲಿ ಕೊಡುವ ವ್ಯವಸ್ಥೆಯನ್ನು ಇನ್ನಷ್ಟು ಪ್ರಾಮಾಣಿಕ ಹಾಗೂ ಪಾರದರ್ಶಕವಾಗಿ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು;

ಆ) ಅನೇಕ ಗ್ರಾಮ ಪಂಚಾಯ್ತಿಗಳಲ್ಲಿ ಪಡಿತರ ಹಂಚುವ ಜವಾಬ್ದಾರಿ ಹೊಂದಿರುವ ಸಂಘ ಸಂಸ್ಥೆಗಳ ವ್ಯಕ್ತಿಗಳು ಪಡಿತರವನ್ನು ತಿಂಗಳಾದ್ಯಂತ ಹಂಚದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಇದನ್ನು ತಿಂಗಳಾದ್ಯಂತ ಹಂಚುವಂತಾಗಲು ಸರಕಾರ ಕೈಗೊಳ್ಳಲಿರುವ ಕ್ರಮಗಳೇನು;